ಅಲ್ಲಿ ನಿಮ್ಮ ಮೇಲೆ ಸಣ್ಣ ಅನುಮಾನ ಬಂತು. ಅಷ್ಟರಲ್ಲಿ ಮಂಗಳಾ ಸಾವಿನ ಸುದ್ದಿ ಬಂದಿತು. ನನ್ನ ಅನುಮಾನ, ನೀವು ಮಂಗಳಾ ಅವರ ತಂದೆ ತಾಯಿಗೆ ಇನ್ನೂ ತಿಳಿಸಿಲ್ಲ ಅಂದಿದ್ದು , ನಿಮ್ಮ ಹಿಂದಿನ ಕೇಸ್‌ಗಳು ಎಲ್ಲ ಒಂದೇ ಮಾತನ್ನು ಹೇಳುತ್ತಿವೆ.'

'ನೀವೇನು ಹೇಳಲು ಹೊರಟಿದ್ದೀರಿ... ತುಸು ಬಿಡಿಸಿ ಹೇಳಿ... ನಿಮ್ಮ ಪ್ರಕಾರ ನಾವೇ ನಮ್ಮ ಹುಡುಗಿಯನ್ನ...'

'ಹೌದು, ಸಾಧಾರಣವಾಗಿ ಹಿಂದಿನ ಎಲ್ಲ ಕೇಸ್‌ಗಳಲ್ಲಿ ತನಿಖೆ ಕೇವಲ ಪ್ರೀತಿ ಪ್ರೇಮ ಎನ್ನುವ ದೃಷ್ಟಿಕೋನದಿಂದ ಪ್ರಾರಂಭಿಸಿದ್ದರು. ಸಾಧಾರಣವಾಗಿ ಇಂತಹ ಪ್ರಕರಣದಲ್ಲಿ ಕೆಲಸದ ಒತ್ತಡದಿಂದಲೋ ಅಥವಾ ಬೇಜವಾಬ್ದಾರಿಯಿಂದಲೋ ನಮ್ಮಿಂದ ವಿಳಂಬ ಆಗುವುದು ಸಹಜ... ಅದೇ ನಿಮಗೆ ಸಹಾಯ ಆಗುತ್ತಿತ್ತು... ಇಲ್ಲಿ ಟ್ರೈನಿ ಇದ್ದಿದ್ದರಿಂದ ವಿಚಾರಣೆ ತಕ್ಷಣ ಪ್ರಾರಂಭ ಆಯಿತು. ಎಲ್ಲಿ ಮಂಗಳಾ ಬಗ್ಗೆ ತನಿಖೆ ಮಾಡಿ ಪತ್ತೆ ಹಚ್ಚಿಬಿಡುತ್ತಾರೋ ಅನ್ನುವ ಭಯದಿಂದ, ಅದೇದಿನ ಸಾಯಂಕಾಲ ಹುಡುಗಿ ಸಿಕ್ಕಿದ್ದಾಳೆ ಎಂದು ಕೇಸ್ ವಾಪಸ್ ಪಡೆಯಲು ನೋಡಿದಿರಿ, ಆ ಯೋಜನೆ ಕೂಡಾ ಕೈಕೊಟ್ಟಿತು. ನಾನು ಮತ್ತೆ ನಿಮ್ಮನ್ನು ವಿಚಾರಿಸಲು ಕಳುಹಿಸಿದೆ. ಹೆದರಿದ ನೀವು ಕಿಡ್ನಾಪ್ ನಾಟಕ ಆಡಿದಿರಿ.'

'ಸ್ಟ್ಯಾಪಿಟ್... ನಮ್ಮ ಮನೆಯ ಹುಡುಗಿ ಸತ್ತಿದ್ದಾಳೆ... ನೀವು ಏನೇನೋ ಆರೋಪ ಹೊರಿಸುತ್ತಿದ್ದೀರಾ?' ಕೂಗಿದ ಸದಾನಂದ.

'ಒಮ್ಮೆ ಕೊಲೆಗೆ ಪ್ರೇರಣೆ ಸಿಕ್ಕಿದರೆ ನಿಮ್ಮನ್ನು ನಮ್ಮ ಕಸ್ಟಡಿಗೆ ತೆಗೆದುಕೊಳ್ಳುವುದು ಸುಲಭ... ಅಲ್ಲಿಂದ ನಮ್ಮ ವಿಧಾನಗಳು ಗೊತ್ತಲ್ಲ ನಿಮಗೆ...' ವ್ಯಂಗ್ಯವಾಗಿ ನುಡಿದ ಪೂಜಾರಿ.

'ಸರ್, ಈ ಕೊಲೆಗೂ ನನಗೂ ಸಂಬಂಧ ಇಲ್ಲ. ನಾನು ಇವನಿಗೆ ಹುಡುಗಿಯರನ್ನು ಕರೆದುಕೊಂಡು ಬರುವುದಕ್ಕೆ ಸಹಾಯ ಮಾಡುತ್ತಿದ್ದೆ. ಗಂಡ ಹೆಂಡತಿ ಅನ್ನುವ ರೀತಿಯಲ್ಲಿ ಹೋದರೆ ಕೆಲಸ ಸುಲಭ ಅಂತಾ' ಸುಮತಿ ಒಂದೊಂದೇ ಶಬ್ದ ನುಡಿದಳು. ಅವಳಿಗೆ ಗೊತ್ತಾಗಿತ್ತು, ಸತ್ಯ ಹೊರಬಂದಿದೆ, ಅದಕ್ಕೆ ಪೂರಕ ಸಾಕ್ಷಿ ಹುಡುಕುವುದಷ್ಟೇ ಬಾಕಿ ಇದೆ ಎಂಬುದು.

'ಅಪ್ರೂವರ್ ಆದರೆ ಶಿಕ್ಷೆ ಕಡಿಮೆ ಆಗಬಹುದು... ಏನಂತೀರಾ ಸುಮತಿ ಅವರೇ?...' ಸುಮತಿ ತಲೆ ಆಡಿಸಿದಳು.

'ಮಂಗಳಾ ಮಿಸ್ಸಿಂಗ್ ಕೇಸ್ ಕ್ಲೋಸ್... ಕಂಗ್ರಾಟ್ಸ್ ಜಗದೀಶ್... ಮೂರೇ ದಿನದಲ್ಲಿ ಬಗೆಹರಿಸಿದೆ... ಇದರೊಂದಿಗೇ ಹೆಣ್ಣು ಮಕ್ಕಳನ್ನು ಮಾರಾಟ ಮಾಡುವ ಜಾಲವನ್ನೂ ಹಿಡಿಯಬೇಕು... ವೆಲ್ಕಂ ಟು ಪೊಲೀಸ್ ಡಿಪಾರ್ಟ್‌ಮೆಂಟ್' ಎಂದು ಕಣ್ಣು ಹೊಡೆದ ಇನ್‌ಸ್ಪೆಕ್ಟರ್ ಪೂಜಾರಿ.

---

## ವಾಸುದೇವ ಮೂರ್ತಿ ಪಿ.

ಹುಟ್ಟಿದ ಊರು ಶಿವಮೊಗ್ಗ. ಬೆಂಗಳೂರಿನಲ್ಲಿ ಸಿವಿಲ್ ಎಂಜಿನಿಯರ್ ವೃತ್ತಿ. ಸಂವಹನ ಕಲೆ ಮತ್ತು ಇತರ ವೃತ್ತಿಪರ ಕೌಶಲ್ಯಗಳಿಗೆ ತರಬೇತಿ ಕೊಡುವ ಸಂಸ್ಥೆಯೊಂದನ್ನು ನಡೆಸುತ್ತಿದ್ದಾರೆ. ಮೊದಲಿನಿಂದಲೂ ಪತ್ತೆದಾರಿ ಸಾಹಿತ್ಯದ ಬಗ್ಗೆ ಆಸಕ್ತಿ. ಪತ್ತೆದಾರಿ ಕಾದಂಬರಿಕಾರರಾದ ಎನ್. ನರಸಿಂಹಯ್ಯ, ಟಿ.ಕೆ. ರಾಮರಾವ್ ಅವರ ಕಾದಂಬರಿಗಳಿಂದ ಶುರುವಾದ ಓದುವ ಆಸಕ್ತಿ ಬಳಿಕ ಬರವಣಿಗೆಯತ್ತ ಹೊರಳಿಕೊಂಡಿದೆ.